

'ಸಾರ್...' ಗಟ್ಟಿಯಾಗಿ ಅಳತೊಡಗಿದ ಮುನಿಯ. 'ಆ ದುಪಟ್ಟಾ ಬೇರೆ ಯಾರದ್ದೂ ಅಲ್ಲ, ನನ್ನ ಅಕ್ಕಂದೇ. ಇನ್ನು ಆ ಚಪ್ಪಲಿಗಳಲ್ಲಿ ಒಂದು ನನ್ನ ಅಪ್ಪಂದು. ಮತ್ತೊಂದು ಅಣ್ಣಂದು. ಇವತ್ತು ಗುಡಿಸಲಿಗೆ ಹೋದಾಗ ಅವರ್‍ಯಾರೂ ಇರಲಿಲ್ಲ. ಆದರೆ ಇವಿಷ್ಟೂ ಹೊರಗೆ ನನ್ನಂತೆಯೇ ಅನಾಥವಾಗಿ ಬಿದ್ದಿದ್ದವು. ತಗೊಂಡು ಬಂದೆ. ಈ ಊರಿನವರು ನನ್ನ ಅಕ್ಕನಿಗಾದ ಅನ್ಯಾಯಕ್ಕೆ ಸಾಕ್ಷಿ ಹೇಳಲಿಲ್ಲ ಅಂತ ಕೇಸು ವಜಾ ಆಗಿದ್ದು ಗೊತ್ತಾಯ್ತು. ಅದರಿಂದಲೇ ಅಣ್ಣನಿಗೆ ಸಿಟ್ಟು ಬಂದು ಅಷ್ಟಾಯ್ತು. ಅಪ್ಪನೂ ನೇಣು ಹಾಕಿಕೊಂಡ. ಅಂದಮೇಲೆ ಅವಳ ಸಾವಷ್ಟೇ ಅಲ್ಲದೇ, ಅಪ್ಪ ಅಣ್ಣನ ಸಾವಿಗೂ ಇವ್ರೆಲ್ಲ ಕಾರಣಾನೇ ಅಲ್ವಾ?' ವಯಸ್ಸಿಗೂ ಮೀರಿದ ನೋವನ್ನು ಆ ಹುಡುಗ ಈಗ ಅನುಭವಿಸುತ್ತ ಭಾವುಕನಾಗಿ ಮಾತನಾಡುತ್ತಿದ್ದಾನೆ. ಪ್ರಾರಂಭದಲ್ಲಿ ದುಃಖ ಮಾತ್ರ ತೋಡಿಕೊಳ್ಳಲು ಮಾತನಾಡುವವನಂತೆ ತೋರುತ್ತಿದ್ದ ಆ ಪುಟ್ಟ ಹುಡುಗ ಈಗ ಒಮ್ಮೆಲೇ ತತ್ವಜ್ಞಾನಿಯಂತೆ ಜನರನ್ನು ದಿಟ್ಟಿಸುತ್ತಾ ಮಾತನಾಡತೊಡಗಿದ;

'ನೋಡಿ, ಈ ಜಾತಿಗೀತಿ ಬದಿಗಿಟ್ಟು ಒಂದು ಸಾತಿ ಯೋಚಿಸಿ. ಅತ್ಯಾಚಾರಗೊಂಡವಳು ಒಂದು ಹೆಣ್ಣು ಅಂತ ಮಾತ್ರ ಅಂದುಕೊಳ್ಳಿ. ಆಗ ನೀವೇನು ಮಾಡುತ್ತಿದ್ದಿರಿ? ಲೊಚಗುಟ್ಟುತ್ತಾ, ಹೆಚ್ಚೆಂದರೆ ಕೆಲವು ಹನಿ ಕಣ್ಣೀರು ಸುರಿಸುತ್ತಿದ್ದಿರಿ. ನಾಲ್ಕು ದಿವಸ ಸ್ಟ್ರೈಕು ಅಂತೆಲ್ಲಾ ಬೊಬ್ಬೆ ಹಾಕಿ ಐದನೇ ದಿನಕ್ಕೆ ಸುಮ್ಮನಾಗಿಬಿಡುತ್ತಿದ್ದಿರಿ. ನಿಮ್ಮ ಜಾತಿಯೋ, ಧರ್ಮದವಳೋ ಆದರೆ ತುಸು ಹೆಚ್ಚು, ಅಂದರೆ ನಾಲ್ಕರ ಬದಲಾಗಿ ಆರು ದಿನ ನ್ಯಾಯಕ್ಕಾಗಿ ಪರಿತಪಿಸಬಹುದೇನೋ ಅಷ್ಟೇ. ಮತ್ತೆ ನಿಮ್ಮ ಬದುಕು ಎಂದಿನಂತೆಯೇ ಇರುತ್ತದೆ. ನಿಮ್ಮ ಮರುಕದ ಒಣ ಮಾತುಗಳಿಗೆ ಬೆಲೆಯುಂಟೇ? ಅಷ್ಟು ಜನರಿಗೆ ಒಬ್ಬ ಕಾಮುಕನನ್ನು ಹಿಡಿದು ಶಿಕ್ಷಿಸಲಾಗದಿದ್ದರೆ, ಕಡೇ ಪಕ್ಷ ಕಾನೂನಿಗೆ ಒಪ್ಪಿಸಿ ಕ್ರೂರ ಶಿಕ್ಷೆಗೆ ದಬ್ಬಲಾಗದಿದ್ದರೆ ಅದೆಂಥ ನಾಗರಿಕ ಸಮಾಜದಲ್ಲಿ ನಾವಿದ್ದೇವೆ? ಕಾಮುಕರ ಪರವಾಗಿದ್ದು ಅವರನ್ನು ರಕ್ಷಿಸುವ ಮಹಾನುಭಾವರೂ ನಮ್ಮ ನಡುವಿದ್ದಾರೆ. ಹಾಗಾದರೆ ನಮ್ಮ ಮೌಲ್ಯಗಳೇನು ಮಣ್ಣು ಸೇರಿದವೆ? ಸಮಾಜದಲ್ಲಿ ಜಾತಿ, ಧರ್ಮ ನೋಡಿ ನೋವಿಗೆ ಮುಲಾಮು ಸವರುವ ಜನರಿರುವ ತನಕ, ಕಚೇರಿಗಳಲ್ಲಿ ದುಡ್ಡು ನೋಡಿ ಮಣೆ ಹಾಕುವವರಿರುವ ತನಕ ಇವಕ್ಕೆಲ್ಲ ನ್ಯಾಯ ಸಿಗಲಾರದು. ಭ್ರಷ್ಟಾಚಾರ ಇಡೀ ದಮನಿತರ ಕುಲವನ್ನೇ ನುಂಗಿನೊಣೆಯುತ್ತದೆ. ಆ ಹೆಣ್ಣುಗಳ ಆತ್ಮಕ್ಕೆ ಸತ್ತಮೇಲೂ ನೋವು ತಪ್ಪಲಾರದು. ಅವು ಮೇಲೆ ಕುಳಿತು ಕೊರಗುತ್ತಲೇ ಹೆಣ್ಣು ಜನ್ಮಕ್ಕೆ ಹಿಡಿ ಮಣ್ಣು ತೂರುತ್ತವೆ' ಆ ಹುಡುಗ ಸುಮ್ಮನಾಗಿ ತಲೆತಗ್ಗಿಸಿದ.

ಮರುಕ್ಷಣದಲ್ಲೇ ಹೊರಡಲು ಹೆಜ್ಜೆ ಕಿತ್ತ. ಸುತ್ತಲೂ ಕಡು ನಿಶ್ಯಬ್ಧ ಆವರಿಸಿತು. ಯಾರೂ ಸೊಲ್ಲೆತ್ತಲಿಲ್ಲ. ಎಲ್ಲರ ಕಣ್ಣುಗಳೂ ಕಾಂತಿ ಕಳೆದುಕೊಂಡು, ಆ ಜಾಗೆಯಲ್ಲಿ ಒಂದು ಬಗೆಯ ತಪ್ಪಿತಸ್ಥ ಭಾವ ತುಳುಕಿತು. ಕಟ್ಟೆಯೊಡೆದು ಧುಮುಕಿತು!

ನನಗೆ ಆ ಹುಡುಗನೊಬ್ಬ ತತ್ವಜ್ಞಾನಿಯಂತೆ, ಸಂತನಂತೆ ಕಂಡ. ಆದರೆ ಅಸಲಿಗವನು ನೋವುಂಡವನು. ಆ ಮಾತುಗಳು ಹಾಗೇ ಇರುತ್ತವೆ ಎಂಬುದು ತಿಳಿಯಿತು. ಈ ತನಕ ನೇಣು ಬಿಗಿದ ಸ್ಥಿತಿಯಲ್ಲಿದ್ದ ಚಪ್ಪಲಿಗಳು ಮತ್ತು ಆ ದುಪಟ್ಟಾ ಇಷ್ಟು ಹೊತ್ತು ಕಂಡದ್ದಕ್ಕಿಂತಲೂ ವಿಭಿನ್ನವಾಗಿ ಕಾಣತೊಡಗಿದವು. ಆ ಬೋಳು ಮರ- ನಮ್ಮ ನಡುವಿನ ರೋಗಗ್ರಸ್ತ ಸಮಾಜದಂತೆ, ದುಪ್ಪಟ್ಟ- ಅಲ್ಲಿನ ಜನರ ನೋವು ಕಂಬನಿಯಂತೆ, ಆ ಜೋಡು ಚಪ್ಪಲಿಗಳು ಮೌಲ್ಯ ಮಾನವೀಯತೆಗಳಂತೆ ಕಂಡವು. ಮುಂದೇನು? ಮಾತು ಖಾಲಿಯೆನಿಸಿದವು. ಯೋಚನೆಯೂ ಸ್ತಬ್ಧಗೊಂಡಂತಾಯ್ತು.

ಸಮಯ ನೋಡಿಕೊಂಡೆ. ಹೊತ್ತು ಜಾಸ್ತಿಯಾಗಿತ್ತು. ಮುಗಿಲು ನೋಡಿದೆ. ಸೂರ್ಯ ಮೆರಗು ಕಳೆದುಕೊಂಡಿದ್ದ. ಆ ಹುಡುಗ ಮೆಲ್ಲಕೆ ಹೆಜ್ಜೆ ಇಡುತ್ತಾ ಮುಂದೆ ಹೊರಟ. ನಾನೂ ಹೊರಡಲು ಅಣಿಯಾದೆ... ●